ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಪರೀಕ್ಷೆ/ನೋ&ಫ/2015-16.

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12.
ದಿನಾಂಕ 21-07-2015.

**ಸುತ್ತೋಲೆ**

ವಿಷಯ: 2015ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ಫಲಿತಾಂಶ ಪ್ರಕಟಣೆ ಹಾಗೂ ಉತ್ತರ ಪತ್ರಿಕೆಗಳ ಫೋಟೋಪ್ರತಿ, ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಅಧಿಸೂಚನೆ ದಿನಾಂಕ 24-05-2002

* * * * *

2015ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ನಿಮ್ಮ ಕಾಲೇಜಿನ ಫಲಿತಾಂಶ ಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಕಳುಹಿಸುತ್ತಿದ್ದು, ಸದರಿ ಫಲಿತಾಂಶವನ್ನು ದಿನಾಂಕ 22-07-2015ರಂದು ಕಾಲೇಜಿನ ನಾಮಫಲಕದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಪ್ರಾಂಶುಪಾಲರಿಗೆ ವಿಶೇಷ ಸೂಚನೆ.**

2015ರ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಹಾಜರಾಗಿದ್ದು, ಪ್ರಕಟಿತ ಫಲಿತಾಂಶದಲ್ಲಿ ನ್ಯೂನ್ಯತೆ ಇದ್ದಲ್ಲಿ ಫಲಿತಾಂಶ ಪ್ರಕಟಿಸಿದ ಒಂದು ವಾರದ ಒಳಗಾಗಿ ಪರೀಕ್ಷಾ ಕೇಂದ್ರದ ಕೊಠಡಿ ಮೇಲ್ವಿಚಾರಕರ ದಿನಚರಿ ಮತ್ತು ಇತರೆ ಪೂರಕ ದಾಖಲೆಗಳನ್ನು ಕೇಂದ್ರ ಕಚೇರಿಗೆ ಖುದ್ದಾಗಿ ಒದಗಿಸಿ ಫಲಿತಾಂಶವನ್ನು ಸರಿಪಡಿಸಿಕೊಳ್ಳುವಂತೆ ಸೂಚಿಸಿದೆ. ತದನಂತರ ಬಂದಂತಹ ಯಾವುದೇ ರೀತಿಯ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ, ಮುಂದೆ ಸಂಭವಿಸಬಹುದಾದ ಆಗುಹೋಗುಗಳಿಗೆ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

**2016ರ ಮಾರ್ಚ್‌ನಲ್ಲಿ ನಡೆಸುವ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ಬಗ್ಗೆ.**

2015ರ ವಾರ್ಷಿಕ ಮತ್ತು ಪೂರಕ ಪರೀಕ್ಷೆಯ ಉತ್ತೀರ್ಣ ಫಲಿತಾಂಶವನ್ನು ತಿರಸ್ಕರಿಸಿ ಪರೀಕ್ಷಾ ಶುಲ್ಕ ಪಾವತಿಸಲು ಮತ್ತು ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸವ ಕುರಿತು ಸುತ್ತೋಲೆ & ಸೂಚನೆಗಳನ್ನು 2015ರ ವಾರ್ಷಿಕ ಪರೀಕ್ಷೆಯ ಉತ್ತೀರ್ಣ ಪ್ರಮಾಣಪತ್ರ ಹಾಗೂ 2015ರ ದ್ವತೀಯ ಪಿಯುಸಿ ಪೂರಕ ಪರೀಕ್ಷೆಯ ಅನುತ್ತೀರ್ಣ ಅಂಕಪಟ್ಟಿಗಳೊಂದಿಗೆ ಸಂಬಂಧಪಟ್ಟ ಕಾಲೇಜಿಗೆ ಕಳುಹಿಸಿಕೊಡಲಾಗುವುದು.

**2015ರ ಜುಲೈ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ಉತ್ತರ ಪತ್ರಿಕೆಗಳ ಫೋಟೋಪ್ರತಿ, ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ಬಗ್ಗೆ.**

"ಕರ್ನಾಟಕ ಪ್ರೀ ಯೂನಿವರ್ಸಿಟಿ ಕೋರ್ಸ್ ಸ್ಟೇಟ್ ಲೆವೆಲ್ ಪರೀಕ್ಷೆ ನಿಯಮಾವಳಿ 1997ರ ನಿಯಮ 29(1) ಹಾಗೂ 30(1)ರ ಪ್ರಕಾರ ದ್ವಿತೀಯ ಪಿಯುಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಫೋಟೋಪ್ರತಿ ಪಡೆಯಲು, ಮರುಮೌಲ್ಯಮಾಪನ ಹಾಗೂ ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

**ಈ ಸಂಬಂಧದ ನಿಯಮಗಳು ಹಾಗೂ ನಿಬಂಧನೆಗಳು:-**

1. ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಾಗಿ/ಮರುಮೌಲ್ಯಮಾಪನಕ್ಕಾಗಿ/ಮರುಎಣಿಕೆಗಾಗಿ ದಿನಾಂಕ **22-07-2015** ರಿಂದ ಅರ್ಜಿ ಸಲ್ಲಿಸಬಹುದು

2. ಬೆಂಗಳೂರು ನಗರದಲ್ಲಿನ 'Bangalore One' ಕೌಂಟರ್‌ಗಳಲ್ಲಿ ಹಾಗೂ ಇತರೆ ನಗರಗಳಾದ ಹುಬ್ಬಳ್ಳಿ-ಧಾರವಾಡ, ತುಮಕೂರು, ಮೈಸೂರು, ಶಿವಮೊಗ್ಗ, ಮಂಗಳೂರು, ದಾವಣಗೆರೆ, ಗುಲ್ಬರ್ಗಾ, ಬೆಳಗಾಂ ಮತ್ತು ಬಳ್ಳಾರಿ ಈ ಜಿಲ್ಲಾ ಕೇಂದ್ರಗಳಲ್ಲಿನ 'Karnataka One' ಕೌಂಟರ್‌ಗಳಲ್ಲಿ ಫೋಟೋಪ್ರತಿ, ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ನಗದು ಶುಲ್ಕಪಾವತಿಸಿ ಅರ್ಜಿಸಲ್ಲಿಸಲು ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳು ಈ ಕೇಂದ್ರಗಳಲ್ಲಿ ನೇರವಾಗಿ ನಗದು ಹಣ ಪಾವತಿಸಿ ಸ್ವೀಕೃತಿ ಪಡೆಯಬಹುದು.

3. ವಿದ್ಯಾರ್ಥಿಗಳು ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಾಗಿ/ಮರುಮೌಲ್ಯಮಾಪನಕ್ಕಾಗಿ/ಮರುಎಣಿಕೆಗಾಗಿ 'www.bangaloreone.gov.in' ವೆಬ್ ಸೈಟ್‌ನಲ್ಲಿ on-line ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಸಂದಾಯ ಮಾಡಲು ಸೌಲಭ್ಯ ಒದಗಿಸಲಾಗಿದೆ. on-line ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಸಂದಾಯದ ಹೆಚ್ಚಿನ ವಿವರಗಳಿಗೆ ಫಲಿತಾಂಶ ಪ್ರಕಟಗೊಂಡ ನಂತರ 'www.bangaloreone.gov.in' ವೆಬ್ ಸೈಟ್‌ನಲ್ಲಿ ಪಡೆಯ ಬಹುದಾಗಿದೆ.

4. 'Bangalore One' ಮತ್ತು 'Karnataka One' ಕೇಂದ್ರಗಳ ಸೌಲಭ್ಯವಿಲ್ಲದ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು ಮತ್ತು ಚಲನ್ ಅನ್ನು ಆಯಾ ಕಾಲೇಜುಗಳಿಂದ ಪಡೆಯುವುದು ಅಥವಾ ಇಲಾಖೆಯ ವೆಬ್‌ಸೈಟ್ *www.pue.kar.nic.in* ನಲ್ಲಿ ಡೌನ್‌ಲೋಡ್ ಮಾಡಿಕೊಂಡು ವಿವರಗಳನ್ನು ಭರ್ತಿಮಾಡಿ ನಿಗದಿತ ಶುಲ್ಕಗಳನ್ನು ಕಡ್ಡಾಯವಾಗಿ ಖಜಾನೆ ಚಲನ್ ಮೂಲಕವೇ ಪಾವತಿಸಿ ಮೂಲ ಚಲನನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.

5. ಹೀಗೆ ಭರ್ತಿ ಮಾಡಿದ ಅರ್ಜಿಯೊಂದಿಗೆ ನಿಗದಿತ ಶುಲ್ಕ ಪಾವತಿಸಿರುವ ಮೂಲ ಖಜಾನೆ ಚಲನ್‌ನನ್ನು ಸ್ಪೀಡ್‌ಪೋಸ್ಟ್ / ಕೊರಿಯರ್ ಮೂಲಕ **'ಉಪನಿರ್ದೇಶಕರು (ಪರೀಕ್ಷೆ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012'** ಇವರ ವಿಳಾಸಕ್ಕೆ ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಸಂಜೆ **5:30** ಗಂಟೆಗಳ ಒಳಗೆ ತಲುಪುವಂತೆ ಕಳುಹಿಸುವುದು. ನಿಗದಿತ ದಿನಾಂಕದ ನಂತರ ತಲುಪಿದ ಅರ್ಜಿಗಳನ್ನು ಮತ್ತು ಅಪೂರ್ಣ ಅರ್ಜಿಗಳನ್ನು ಯಾವುದೇ ಸೂಚನೆ ಇಲ್ಲದೆ ತಿರಸ್ಕರಿಸಲಾಗುವುದು.

## ಎ. ಉತ್ತರ ಪತ್ರಿಕೆಯ ಫೋಟೋಪ್ರತಿ ಬಗ್ಗೆ:

1. ಉತ್ತರ ಪತ್ರಿಕೆಯ ಫೋಟೋಪ್ರತಿಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **25-07-2015**
2. ಫೋಟೋ ಪ್ರತಿಯ ಶುಲ್ಕ – ಪ್ರತಿ ವಿಷಯಕ್ಕೆ **₹.504-00.**
3. ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಳನ್ನು ಅಭ್ಯರ್ಥಿಗಳು ನೀಡಿರುವ ವಿಳಾಸಕ್ಕೆ ಸ್ಪೀಡ್ ಪೋಸ್ಟ್ (Speed Post) ಮೂಲಕ ಕಳುಹಿಸಿಕೊಡಲಾಗುವುದು. ಖುದ್ದಾಗಿ ನೀಡಲಾಗುವುದಿಲ್ಲ. ಆದಕಾರಣ ಯಾವುದೇ ವಿದ್ಯಾರ್ಥಿ ಅಥವಾ ಅವರ ಪೋಷಕರು ಇಲಾಖೆಯ ಕಛೇರಿಗೆ ಬರಬಾರದು.

**ವಿಶೇಷ ಸೂಚನೆ**

4. ಫೋಟೋಪ್ರತಿಗಾಗಿ ಅರ್ಜಿ ಸಲ್ಲಿಸುವ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ ಚಾಲ್ತಿಯಲ್ಲಿರುವ ತಮ್ಮ ಇ-ಮೇಲ್ ಐಡಿ ನೀಡತಕ್ಕದ್ದು. (Valid e-mail ID)
5. ವಿದ್ಯಾರ್ಥಿಗಳು ಸಲ್ಲಿಸಿರುವ ಇ-ಮೇಲ್ ಐಡಿ (e-mail ID) ವಿಳಾಸಕ್ಕೆ ಉತ್ತರಪತ್ರಿಕೆಯ ಸ್ಕ್ಯಾನ್ ಮಾಡಲಾದ ಪ್ರತಿಯನ್ನು ಕಳುಹಿಸಿ ಕೊಡಲಾಗುವುದು.
6. ವಿದ್ಯಾರ್ಥಿಗಳು ತಮ್ಮ ಸ್ಕ್ಯಾನ್ ಮಾಡಲಾದ ಉತ್ತರ ಪತ್ರಿಕೆಯನ್ನು ಇಲಾಖಾ ವೆಬ್ ಸೈಟ್ '*www.pue.kar.nic.in*'ನ ಮುಖಾಂತರ ಮುಂದೆ ನೀಡಲಾಗುವ ಲಿಂಕ್ ವೆಬ್ ಸೈಟ್‌ನಲ್ಲಿ ತಮ್ಮ ನೋಂದಣಿ ಸಂಖ್ಯೆ ನಮೂದಿಸಿದ ನಂತರ ತಮ್ಮ ನೋಂದಾಯಿಸಲಾದ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವ OTP (One Time Password)ಯನ್ನು ಮುಂದಿನ ಅಂಕಣದಲ್ಲಿ ಭರ್ತಿ ಮಾಡಿದಲ್ಲಿ ತಮ್ಮ ಉತ್ತರ ಪತ್ರಿಕೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ/ವೀಕ್ಷಿಸಬಹುದಾಗಿದೆ.
7. ಬೆಂಗಳೂರು ಒನ್ / ಕರ್ನಾಟಕ ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸುವಾಗ ಚಾಲ್ತಿಯಲ್ಲಿರುವ ತಮ್ಮ ಇ-ಮೈಲ್ ಐಡಿ (Valid e-mail ID) ಕಡ್ಡಾಯವಾಗಿ ನೀಡತಕ್ಕದ್ದು ಹಾಗೂ ಅಂಚೆ ವಿಳಾಸವನ್ನು ಸಹ ಪಿನ್‌ಕೋಡ್‌ನೊಂದಿಗೆ ನೀಡುವುದು.

## ಬಿ. ಉತ್ತರ ಪತ್ರಿಕೆಯ ಮರುಮೌಲ್ಯಮಾಪನ:

1. ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **25-07-2015**
2. ಮರುಮೌಲ್ಯಮಾಪನದ ಶುಲ್ಕ – ಪ್ರತಿ ವಿಷಯಕ್ಕೆ **₹.1260-00**

3. ಮರುಮೌಲ್ಯಮಾಪನದ ಫಲಿತಾಂಶವನ್ನು ಅಭ್ಯರ್ಥಿಯು ನೀಡಿರುವ ವಿಳಾಸಕ್ಕೆ ಸ್ಪೀಡ್ ಪೋಸ್ಟ್ (Speed Post) ಮೂಲಕ ಕಳುಹಿಸಿಕೊಡಲಾಗುವುದು. ಈ ಬಗ್ಗೆ ಖುದ್ದು ವಿಚಾರಣೆ ಅಗತ್ಯವಿರುವುದಿಲ್ಲ. ಆದ ಕಾರಣ ಯಾವುದೇ ವಿದ್ಯಾರ್ಥಿ ಅಥವಾ ಅವರ ಪೋಷಕರು ಇಲಾಖೆಯ ಕಚೇರಿಗೆ ಬರಬಾರದು.

4. ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಮುಂದಿನ ವ್ಯಾಸಂಗಕ್ಕೆ ಹಾಗೂ ಅನುತ್ತೀರ್ಣ ಅಭ್ಯರ್ಥಿಗಳು ಮುಂದಿನ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಮರುಮೌಲ್ಯಮಾಪನದ ಫಲಿತಾಂಶಕ್ಕಾಗಿ ಕಾಯದೆ ಮುಂದುವರಿಯುವುದು.

5. ಮರುಮೌಲ್ಯಮಾಪನದ ಬಗ್ಗೆ ಮರುಮೌಲ್ಯಮಾಪನ ಕಮಿಟಿಯವರು ತೆಗೆದುಕೊಂಡ ನಿರ್ಧಾರವೇ ಅಂತಿಮ. ಇದರ ಮೇಲೆ ಮರು ಪರಿಶೀಲನೆ ಅಥವಾ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ.

6. ಮರುಮೌಲ್ಯಮಾಪನದಲ್ಲಿ 5 ಅಂಕಗಳವರಗೆ ಹೆಚ್ಚು ಇಲ್ಲವೇ ಕಡಿಮೆಯಾದಲ್ಲಿ ಆ ಅಂಕಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

7. ಮರುಮೌಲ್ಯಮಾಪನದಲ್ಲಿ ಒಟ್ಟು 6 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳು ಕಡಿಮೆಯಾದಲ್ಲಿ ಅಂತಹ ಅಂಕಗಳೊಂದಿಗೆ ಫಲಿತಾಂಶವನ್ನು ಪರಿಷ್ಕರಿಸಿ ಪ್ರಕಟಿಸಲಾಗುವುದು. ಆ ವಿಷಯಕ್ಕೆ ಪಾವತಿಸಿರುವ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

8. ಮರುಮೌಲ್ಯಮಾಪನದಲ್ಲಿ ಒಟ್ಟು 06 ಅಥವ ಅದಕ್ಕಿಂತ ಹೆಚ್ಚಿನ ಅಂಕಗಳು ಹೆಚ್ಚಾದಲ್ಲಿ ಅಂತಹ ಫಲಿತಾಂಶವನ್ನು ಪರಿಷ್ಕರಿಸಿ ಇಲಾಖಾ ವೆಬ್‌ಸೈಟ್ *www.pue.kar.nic.in* ನಲ್ಲಿ ಪ್ರಕಟಿಸಲಾಗುವುದು. ಆ ವಿಷಯಕ್ಕೆ ಪಾವತಿಸಿರುವ ಮರುಮೌಲ್ಯಮಾಪನ ಶುಲ್ಕದ ಹಣವನ್ನು ಅಭ್ಯರ್ಥಿಗೆ ಹಿಂದಿರುಗಿಸಲಾಗುವುದು.

9. **ವಿದ್ಯಾರ್ಥಿಗೆ ಮರುಮೌಲ್ಯಮಾಪನ ಅವಶ್ಯವೆನಿಸಿದಲ್ಲಿ ಫೋಟೋಪ್ರತಿಗಾಗಿ ಕಾಯದೆ ನೇರವಾಗಿ ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸುವುದು.**

**ಸಿ. ಅಂಕಗಳ ಮರುಎಣಿಕೆ:**

1. ಅಂಕಗಳ ಮರುಎಣಿಕೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **25-07-2015**
2. ಅಂಕಗಳ ಮರುಎಣಿಕೆಗೆ ಶುಲ್ಕ ಪ್ರತಿ ವಿಷಯಕ್ಕೆ **₹.336-00**
3. ಮರುಎಣಿಕೆ ಫಲಿತಾಂಶವನ್ನು ಅಭ್ಯರ್ಥಿಯ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಅರ್ಜಿಗಳ ಹಿಂಬದಿಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೆ ಗಮನಿಸುವುದು. ಬೆಂಗಳೂರು ಒನ್ / ಕರ್ನಾಟಕ ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸುವಾಗ ವಿಳಾಸಗಳನ್ನು ಪಿನ್‌ಕೋಡ್‌ನೊಂದಿಗೆ ನೀಡುವುದು. ಆಯಾ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಸಂಜೆ 5.30 ಘಂಟೆಯೊಳಗಾಗಿ ಈ ಕಛೇರಿಗೆ ತಲುಪುವಂತೆ ಕಳುಹಿಸಬೇಕು. <u>ನಿಗದಿತ ದಿನಾಂಕದ ನಂತರ ಬಂದಂತಹ ಅರ್ಜಿಗಳನ್ನು ಮತ್ತು ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.</u>

2/7/15

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

1. ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.